ಮಡಿಕೇರಿ ಸರ್ಕಾರಿ ಐ.ಟಿ.ಐ. ನಲ್ಲಿ ಉಪನ್ಯಾಸಕರ ಕೊರತೆ

192 (263) ಶ್ರೀ ಡಿ. ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಉಪ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಮಡಿಕೇರಿ ಸರ್ಕಾರಿ ಐ.ಟಿ.ಐ. ನಲ್ಲಿ ಉಪನ್ಯಾಸಕರ ಕೊರತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಹಾಗಿದ್ದಲ್ಲಿ ಖಾಲಿ ಹುದ್ದೆಗಳನ್ನು ತುಂಬಲು ಸರ್ಕಾರದವರು ಕೈಗೊಂಡ ಕ್ರಮಗಳೇನು;

ಆ) ಈ ಐ.ಟಿ.ಐ. ನಲ್ಲಿ ಹಲವು ಉಪಕರಣಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ.

ಹಾಗಿದ್ದಲ್ಲಿ ಈ ಬಗ್ಗೆ ಕೈಗೊಂಡ ಕ್ರಮಗಳೇನು?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿಗಳು) :

ಅ) ಹೌದು

4 ಹುದ್ದೆಗಳನ್ನು ಭರ್ತಿ ಮಾಡಲಾಗಿದೆ.

6 ಹುದ್ದೆಗಳನ್ನು ಇಷ್ಟರಲ್ಲಿಯೇ ಭರ್ತಿ ಮಾಡಲಾಗುವುದು

ಆ) ಹೌದು

ಹೊಸ ಯಂತ್ರೋಪಕರಣಗಳನ್ನು ರೂ. 35 ಲಕ್ಷಗಳ ವೆಚ್ಚದಲ್ಲಿ ಖರೀದಿಸಿ ಒದಗಿಸಲಾಗಿದೆ.

ಕೊಡಗಿನಲ್ಲಿ ಸೇಂದಿ ಇಳಿಸಲು ಅನುಮತಿ

193 (262) ಶ್ರೀ ಡಿ. ಎಸ್. ಮಾದಪ್ಪ (ಮಡಿಕೇರಿ) : ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಕೊಡಗಿನಲ್ಲಿ ಹಿಂದೆ ಕುಲಕಸುಬಾಗಿದ್ದ ಸೇಂದಿ ಇಳಿಸುವ ಹಕ್ಕನ್ನು ಸರ್ಕಾರ ರದ್ದುಗೊಳಿಸಿರುವುದಕ್ಕೆ ಕಾರಣವೇನು?

ಆ) ನೆರೆಯ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸೇಂದಿ ಇಳಿಸಲು ಅನುಮತಿ ನೀಡಿದ್ದು ಕೊಡಗು ಜಿಲ್ಲೆಯಲ್ಲಿ ಮಾತ್ರ ನಿಷೇಧಿಸಿರುವುದಕ್ಕೆ ಸರ್ಕಾರದವರ ನಿರ್ಧಾರಕ್ಕೆ ಕಾರಣಗಳೇನು?

ಇ) ಕೊಡಗಿನಲ್ಲಿ ಸಾಕಷ್ಟು ಜನರ ಜೀವನೋಪಾಯ ಸೇಂದಿ ಇಳಿಸುವುದರಿಂದಲೇ ಸಾಗುತ್ತಿದ್ದು ಸರ್ಕಾರ ಪುನ: ಸೇಂದಿ ಇಳಿಸುವ ಅನುಮತಿಯನ್ನು ಮೂರ್ತೆದಾರರಿಗೆ ಮರಳಿ ಒದಗಿಸಲು ಕ್ರಮ ಕೈಗೊಳ್ಳುವುದೇ?

ಶ್ರೀ ಜೆ. ಹೆಚ್. ಪಟೇಲ್ (ಮುಖ್ಯ ಮಂತ್ರಿಗಳು) :

ಅ) ಕಲಬೆರಕೆ ಸೇಂದಿಯ ಸೇವನೆಯನ್ನು ತಡೆಗಟ್ಟುವ ಸಲುವಾಗಿ ರದ್ದುಗೊಳಿಸಲಾಗಿದೆ.

ಆ) ಸಾಕಷ್ಟು ಪ್ರಮಾಣದಲ್ಲಿ ಸೇಂದಿ ಮರಗಳು ಲಭ್ಯವಿಲ್ಲದ ಕಾರಣ ಹಾಗೂ ಆರೋಗ್ಯಕ್ಕೆ ಹಾನಿಕರವಾದ ಕಲಬೆರಕೆ ಸೇಂದಿ ಸೇವನೆ ತಡೆಗಟ್ಟುವ ಸಲುವಾಗಿ ಇಡೀರಾಜ್ಯದಲಿ ಕೊಡಗು ಜಿಲ್ಲೆ ಸೇರಿದಂತೆ 1990-91 ನೇ ವರ್ಷದಿಂದ ಸೇಂದಿ ಮಾರಾಟವನ್ನು ನಿಷೇದಿಸಲಾಯಿತು. ಆದರೆ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಸಾಕಷ್ಟು ಸಂಖ್ಯೆಯಲ್ಲಿ ಸೇಂದಿ ಮರಗಳು ಲಭ್ಯವಿರುವ ಕಾರಣ, ಅಲ್ಲಿ ಸೇಂದಿ ಇಳಿಸಲು ಅನುಮತಿ ನೀಡಲಾಗಿದೆ.

ಇ) ಇಲ್ಲ

ಗುರುಮಿಟ್ಕಲ್ ವಿಧಾನ ಕ್ಷೇತ್ರದಲ್ಲಿ ಗಡಿ ಪ್ರದೇಶಾಭಿವೃದ್ಧಿಯ ಕಾಮಗಾರಿಗಳು

194 (259) ಶ್ರೀ ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಉಪ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಗಡಿ ಪ್ರದೇಶಾಭಿವೃದ್ಧಿ ಯೋಜನೆಯಡಿಯಲ್ಲಿ ಗುರುಮಿಟ್ಕಲ್ ಮತಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವ ಯಾವ ಕಾಮಗಾರಿಗಳು ಮಂಜೂರಾತಿ ಆಗಿವೆ ಮತ್ತು ಪ್ರಾರಂಭವಾಗಿವೆಯೆ.

ಆ) ಪ್ರತಿ ಕಾಮಗಾರಿಗೂ ಮಾಡಲಾದ ಅಂದಾಜು ಮತ್ತು ಒದಗಿಸಿದ ಅನುದಾನ ಮತ್ತು ಖರ್ಚಾದ ಹಣವೆಷ್ಟು?

ಇ) ಈ ಕಾಮಗಾರಿಗಳು ಯಾವ ಹಂತದಲ್ಲಿವೆ?

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯ ಮಂತ್ರಿಗಳು) :

ಅ) 1997-98 ನೇ ಸಾಲಿನಲ್ಲಿ ಯಾದಗೀರ್ ತಾಲ್ಲೂಕಿಗೆ 14. 10 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಲಾಗಿದೆ. ಕ್ರಿಯಾ ಯೋಜನೆಯನ್ನು ಸಿದ್ದಪಡಿಸಲಾಗುತ್ತಿದೆ. ಇದು ಅಂಗೀಕಾರವಾದ ನಂತರ ಕಾಮಗಾರಿಯನ್ನು ಪ್ರಾರಂಭಿಸಲಾಗುವುದು.

ಯಾದಗಿರಿ ತಾಲ್ಲೂಕಿನಲ್ಲಿ ರಸ್ತೆಗಳ ಕಾಮಗಾರಿ

195 (260) ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಗುರುಮಿಠಕಲ್) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ

ಅ) ಯಾದಗಿರಿ ತಾಲ್ಲೂಕಿನ ವ್ಯಾಪ್ತಿಯಲ್ಲಿ ಬರುವ ಮುಸ್ತೂರ್‌ನಿಂದ ಮತ್ತು ಫಸ್‌ಪೂಲ್‌ನಿಂದ ಮುದ್ನಾಳ್ ಕಂದಕೂರ್ ಮಾರ್ಗದ ಗ್ರಾಮಗಳ ರಸ್ತೆಗಳನ್ನು ನಬಾರ್ಡ್ ಯೋಜನೆಯಡಿಯಲ್ಲಿ ತೆಗೆದುಕೊಳ್ಳಲಾಗಿದೆಯೆ?

ಆ) ಈ ರಸ್ತೆಗಳಿಗೆ ಯಾವಾಗ ಮಂಜೂರಾತಿ ಆಗಿದೆ ಮತ್ತು ಪ್ರಾರಂಭವಾದ ವರ್ಷ ಯಾವುದು?

ಇ) ಈ ಎರಡು ರಸ್ತೆಗಳ ನಿರ್ಮಾಣಕ್ಕೆ ತಗಲುವ ವೆಚ್ಚವೆಷ್ಟು ಮತ್ತು ಬಿಡುಗಡೆಯಾದ ಅನುದಾನ ಎಷ್ಟು?